ಇ) ಹಾಗಿದ್ದಲ್ಲಿ, ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಬದಲಾಗಿ, ಮೇಲ್ಕಂಡ ಉದ್ದೇಶಗಳಿಗಾಗಿ ಈ 408 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳದೇ ಇರಲು ಕಾರಣಗಳೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್ ವೇ ದಿಕ್ಕನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದವರ ನಿರ್ದೇಶನದ ಮೇರೆಗೆ ಬದಲಾಯಿಸಿರುವ ಹಿನ್ನೆಲೆಯಲ್ಲಿ ಈ ಜಮೀನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೆಚ್ಚುವರಿಯಾಗಿ ಕಂಡುಬಂದಿದ್ದರಿಂದ ಇದನ್ನು ಸದರಿ ಸಂಸ್ಥೆಗೆ ಹಸ್ತಾಂತರಿಸುವುದಿಲ್ಲ ಈ ಭೂಮಿಯು ವಿಮಾನ ನಿಲ್ದಾಣಕ್ಕೆ ಅತಿ ಸಮೀಪದಲ್ಲಿರುವ ಪ್ರಾಮುಖ್ಯತೆಯನ್ನು ಪರಿಗಣಿಸಿ ಈ ಭೂಮಿಯನ್ನು ಹಂತ ಹಂತವಾಗಿ ಹರಾಜು ಮೂಲಕ ನೀಡಲು ತೀರ್ಮಾನಿಸಲಾಗಿದೆ

ಆ) ಬಂದಿದೆ

ಇ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯಾಪ್ತಿಯಲ್ಲಿರುವ 408 ಎಕರೆ ಭೂಮಿಯ ಪೈಕಿ ಸೇವೆಗಳು, ಯುಟಿಲಿಟೀಸ್‌ಗಳಿಗಾಗಿ (ರಸ್ತೆ, ಒಳಚರಂಡಿ, ಕಲ್ವರ್ಟ್, ನೀರಿನ ಹಾಗೂ ಒಳಚರಂಡಿ ಪೈಪ್‌ಗಳನ್ನು ಅಳವಡಿಸುವಿಕೆ ಹಾಗೂ ವಿದ್ಯುತ್, ದೂರವಾಣಿ ಇತ್ಯಾದಿಗಳಿಗಾಗಿ) ಅಂದಾಜು 85 ಎಕರೆ ಜಮೀನನ್ನು, ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳಿಗೆ 53 ಎಕರೆ ಜಮೀನನ್ನು ನೀಡಿದ್ದಲ್ಲಿ ಉಳಿಯುವ ಭೂಮಿಯ ವಿಸ್ತೀರ್ಣವು 270 ಎಕರೆ ಮಾತ್ರ ಈ ವಿಸ್ತೀರ್ಣವು ಮೇಲೆ ಹೇಳಿದ ಎಲ್ಲಾ ಉದ್ದೇಶಗಳಿಗೆ ಸಾಕಾಗುವುದಿಲ್ಲವಾದುದರಿಂದ ಕೈಗಾರಿಕಾ ಇಲಾಖೆ ಹೆಚ್ಚುವರಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತಿದೆ

1540 (2061) ಶ್ರೀ ರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಸರ್ಕಾರ ಗುರ್ತಿಸಿರುವ ಪ್ರವಾಸಿ ಕೇಂದ್ರಗಳಾವುವು (ವಿವರ ಒದಗಿಸುವುದು),

ಆ) ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಪ್ರಸ್ತುತ ವರ್ಷ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು,

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ –

1) ವಿದುರಾಶ್ವತ್ಥ 2) ಮಿಣಕನಗುರ್ಕಿ 3) ನಂದಿಬೆಟ್ಟ

4) ಮುದ್ದೇನಹಳ್ಳಿ 5) ಬಂಗಾರ ತಿರುಪತಿ 6) ಕೈವಾರ

7) ಕುರುಡಮಲೈ 8) ಮುಳಬಾಗಿಲು 9) ಕಮ್ಮಸಂದ್ರ

10) ಬೇತಮಂಗಲ (ಕೋಟಿಲಿಂಗೇಶ್ವರ) 11) ಬಾಗೇಪಲ್ಲಿ

ಆ) ಪ್ರಸ್ತುತ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ

1) ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ರೂ 12 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

2) ಕೈವಾರದಲ್ಲಿ ರೂ 12 70 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ನಿರ್ಮಿಸಲಾಗುತ್ತಿದ್ದು, ಕಾಮಗಾರ ಪ್ರಗತಿಯಲ್ಲಿದೆ

1541 (2062) ಶ್ರೀ ಶ್ರೀರಾಮರೆಡ್ಡಿ ಜಿ ಎ (ಬಾಗೇಪಲ್ಲಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?